## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಚುನಾವಣಾ ಆಯೋಗಕ್ಕೆ 2018-19ನೇ ಸಾಲಿನ ಅನುದಾನದ 3ನೇ ಕಂತನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ಇವರ ಪತ್ರ ಸಂಖ್ಯೆ:ರಾಚುಆ.03. ಲೆಕ್ಕ/2018-19, ದಿನಾಂಕ:23-10-2018.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 171 ತಾಪಸ 2017, ಬೆಂಗಳೂರು, ದಿನಾಂಕ:26-04-2018, ಮತ್ತು 16-08-2018.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಚುನಾವಣಾ ಆಯೋಗದ ಪತ್ರದಲ್ಲಿ ರಾಜ್ಯ ಚುನಾವಣಾ ಆಯೋಗವು ವೇತನೇತರ ಅನುದಾನದ ಮೂರನೇ ಕಂತನ್ನು ಬಿಡುಗಡೆ ಮಾಡಲು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-11 | | | | ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17 | | | |
|---|---|---|---|---|---|---|---|
| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ (ರೂ.ಲಕ್ಷಗಳಲ್ಲಿ) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆ ಯಾಗಬೇಕಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) (3ನೇ ಕಂತು) | ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ) | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಬೇಕಾ ಗಿರುವ ಅನುದಾನ (ರೂ.ಲಕ್ಷಗಳಲ್ಲಿ) (3ನೇ ಕಂತು) |
| 059 | ಜಿಲ್ಲಾ/ ತಾಲ್ಲೂಕು/ ಇತರೆ ಚುನಾವಣಾ ವೆಚ್ಚಗಳು | 645.00 | 161.25 | 041 | ಪ್ರಯಾಣ ವೆಚ್ಚಗಳು | 5.00 | 1.25 |
| | | | | 051 | ಸಾಮಾನ್ಯ ವೆಚ್ಚಗಳು | 84.00 | 21.00 |
| | | | | 071 | ಕಟ್ಟಡ ವೆಚ್ಚಗಳು | 50.00 | 12.50 |
| | | | | 195 | ಸಾರಿಗೆ ವೆಚ್ಚಗಳು | 27.00 | 6.75 |
| | | | | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 3.75 |
| | | | | | ಒಟ್ಟು: | **181.00** | **45.25** |

ಮೇಲೆ ಓದಲಾದ (2)ರ ಆದೇಶಗಳಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ: 2515-00-101-0-11 ಮತ್ತು 2515-00-101-0-17ಗಳಿಗೆ ರೂ.645.00ಲಕ್ಷಗಳು ಹಾಗೂ ರೂ.180.00ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಸದರಿ ಲೆಕ್ಕ ಶೀರ್ಷಿಕೆಗಳಿಗೆ ಒಂದನೇ ಮತ್ತು ಎರಡನೇ ಕಂತುಗಳಲ್ಲಿ ಒಟ್ಟಾರೆ ಕ್ರಮವಾಗಿ ರೂ.322.5ಲಕ್ಷಗಳು ಹಾಗೂ ರೂ.90.5ಲಕ್ಷಗಳನ್ನು ಖಜಾನೆ-2 ಮೂಲಕ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (1)ರ ರಾಜ್ಯ ಚುನಾವಣಾ ಆಯೋಗ ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ:2515-00-101-0-11 ಮತ್ತು 2515-00-101-0-17ಗಳಿಗೆ ಕ್ರಮವಾಗಿ ರೂ.645.00ಲಕ್ಷಗಳು ಹಾಗೂ ರೂ.180.00ಲಕ್ಷಗಳನ್ನು ಒದಗಿಸಿದ್ದು, ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿದ ನಂತರ ಬಾಕಿ ಉಳಿದ ರೂ.322.5ಲಕ್ಷಗಳು ಹಾಗೂ ರೂ.90.5ಲಕ್ಷಗಳಲ್ಲಿ 3ನೇ ಕಂತಿನ ರೂಪದಲ್ಲಿ ಸದರಿ ಲೆಕ್ಕ ಶೀರ್ಷಿಕೆಗಳಿಗೆ ಕ್ರಮವಾಗಿ ರೂ.161.25ಲಕ್ಷ ಹಾಗೂ ರೂ.45.25ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 171 ತಾಪಸ 2017, ಬೆಂಗಳೂರು, ದಿನಾಂಕ:05-12-2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2018-19ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯು ಆಯವ್ಯಯದ ಲೆಕ್ಕ ಶೀರ್ಷಿಕೆ:2515-00-101-0-11 ಮತ್ತು 2515-00-101-0-17ಗಳಿಗೆ ಕ್ರಮವಾಗಿ ರೂ.645.00ಲಕ್ಷಗಳು ಹಾಗೂ ರೂ.180.00ಲಕ್ಷಗಳನ್ನು ಒದಗಿಸಿದ್ದು, ಸದರಿ ಲೆಕ್ಕ ಶೀರ್ಷಿಕೆಗಳಿಗೆ 3ನೇ ಕಂತು ಅನುದಾನ ಕ್ರಮವಾಗಿ ರೂ.161.25ಲಕ್ಷ ಹಾಗೂ ರೂ.45.25ಲಕ್ಷಗಳ ಅನುದಾನವನ್ನು ಖಜಾನೆ-2 ಮೂಲಕ ಬಿಡುಗಡೆಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 4 ಟಿಎಫ್‌ಪಿ 2018, ದಿನಾಂಕ: 24-07-2018 ರಲ್ಲಿ ಆಯಾಯ ಇಲಾಖೆ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ವಿ.ವೆಂಕಟೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**<u>ಇವರಿಗೆ:</u>**

ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು-1.

**<u>ಪ್ರತಿಯನ್ನು:</u>**

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ, ನಂ-8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ಉಪಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ಮೇಲ್ವಿಚಾರಕರು, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

# ಅನುಬಂಧ

(ರೂ.ಲಕ್ಷಗಳಲ್ಲಿ)

| ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-11 | | | | | ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17 | | | | |
|---|---|---|---|---|---|---|---|---|---|
| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ | ರಾಜ್ಯ ಚುನಾವಣಾ ಆಯೋಗಕ್ಕೆ 1ನೇ ಮತ್ತು 2ನೇ ಕಂತುಗಳಲ್ಲಿ ಬಿಡುಗಡೆಯಾಗಿರುವ ಒಟ್ಟು ಅನುದಾನ | 3ನೇ ಕಂತಿನಲ್ಲಿ ಬಿಡುಗಡೆಯಾಗ ಬೇಕಾಗಿರುವ ಅನುದಾನ | ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯ ದಲ್ಲಿ ಬಿಡುಗಡೆ ಮಾಡಿರುವ ಅನುದಾನ | ರಾಜ್ಯ ಚುನಾವಣಾ ಆಯೋಗಕ್ಕೆ 1ನೇ ಮತ್ತು 2ನೇ ಕಂತುಗಳಲ್ಲಿ ಬಿಡುಗಡೆಯಾಗಿರುವ ಅನುದಾನ | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಬೇಕಾಗಿರುವ ಅನುದಾನ (3ನೇ ಕಂತು) |
| 059 | ಜಿಲ್ಲಾ/ ತಾಲ್ಲೂಕು/ ಇತರೆ ಚುನಾವಣಾ ವೆಚ್ಚಗಳು | 645.00 | 322.5 | 161.25 | 041 | ಪ್ರಯಾಣ ವೆಚ್ಚಗಳು | 5.00 | 2.5 | 1.25 |
| | | | | | 051 | ಸಾಮಾನ್ಯ ವೆಚ್ಚಗಳು | 84.00 | 42.00 | 21.00 |
| | | | | | 071 | ಕಟ್ಟಡ ವೆಚ್ಚಗಳು | 50.00 | 25.00 | 12.50 |
| | | | | | 195 | ಸಾರಿಗೆ ವೆಚ್ಚಗಳು | 27.00 | 13.5 | 6.75 |
| | | | | | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 7.5 | 3.75 |
| ಒಟ್ಟು: | | **645.00** | **322.5** | **161.25** | ಒಟ್ಟು: | | **181.00** | **90.5** | **45.25** |

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ